ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ನಂ. 15.

ಬೆಂಗಳೂರು, ಗುರುವಾರ, ಏಪ್ರೆಲ್ ತಾ|| 15, ಸ|| 1909.

II ನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮೊದಲಾದವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತಫ್ಸೀರ್.

ಸ|| 1904ನೆ ಇಸವಿ ಫೆಬ್ರವರಿ 1ನೆ ತಾರೀಖಿನ 72ನೆ ನಂಬರಿನ ರೂಲ್ ಆಫ್ ಪ್ರಾಕ್ಟಿಸಿಗೆ ಅನುಬಂಧನೆ.

1909ನೆ ಇಸವಿ ಮಾರ್ಚಿ ತಿಂಗಳು 23ನೆ ತಾರೀಖು.

ಮೇಲ್ಕಂಡ ರೂಲ್ ಆಫ್ ಪ್ರಾಕ್ಟಿಸಿಗೆ ಲಗತ್ತಾದ ಫಾರಂಗಳ ಪಟ್ಟಿಗೆ ಈ ಕೆಳಗೆ ಕೊಟ್ಟಿರುವ ಫಾರಮನ್ನು ಸೇರಿಸತಕ್ಕದ್ದು.

ಫಾರಮಿನ ನಂಬರು.	ಕ್ರಿಮಿನಲ್ ಪ್ರೊಸೀಜರ್ ಕೋಡ್ ಅಥವಾ ಇತರ ಕಾನೂನಿನ ಸೆಕ್ಷನ್.	ಫಾರಮಿನ ಹೆಸರು.	ಇಂಗ್ಲೀಷಿನಲ್ಲೋ ಅಥವಾ ಕನ್ನಡದಲ್ಲೋ.
86	ಇ-ಪಿ-ಕೊ 68 & 69. ...	ಜರಿಮಾನೆ ವಸೂಲಾದದ್ದನ್ನು ಜೈಲಿಗೆ ತಿಳುಹಿಸುವುದು.	ಎರಡರಲ್ಲಿಯು.

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.

ಫೈನಾನ್ಷಿಯಲ್ ಇಲಾಖೆ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷ್ಣಗಳನ್ನು ಮೈಸೂರು ಸೀಮೆಯ ಶ್ರೀಮತ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷ್ಣನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷ್ಣ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದು ಕ್ಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಎಕ್ಸೈಜ್ ಇಲಾಖೆ.

ಇಸ್ತಿಹಾರ್‌ನಾಮೆ.

ಅಬ್ಕಾರಿ ಮತ್ತು ಅಫೀಮಿಗೆ ಸಮ್ಮಂಧಪಟ್ಟ ಒಟ್ಟು ಸ್ವಾತಂತ್ರ್ಯದ ಹರಾಜು ನೋಟೀಸು.

ನಂಬರ್ 9011, ಬೆಂಗಳೂರು, 7ನೆ ಏಪ್ರೆಲ್ 1909.

I. ನಿಯಾಮಕವಾದ ಮತ್ತು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಅಂಗಡಿಗಳಲ್ಲಿ ಸರಾಬು, ಮದತ್ ಪದಾರ್ಥಗಳು ಮತ್ತು ಅಫೀಮನ್ನು 1909ನೆ ಇಸವಿ ಜುಲೈ ಗುರ್ರೆ ಲಾಗಾಯತು 1910ನೆ ಇಸವಿ ಜೂನ್ 30 ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಬಿಕರಿ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಬಳಪಟ್ಟು ಡೆಪ್ಯುಟಿ ಕಮಿಷನರವರು ಯಾ ರೆವಿನ್ಯೂ ಅಸಿಸ್ಟೆಂಟ್ ಕಮಿಷನರವರು ಯಾ ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರು ಯಾ ಡೆಪ್ಯುಟಿ ಕಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಆಫಿಸರು ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಆ ತಃಖ್ತೆಯಲ್ಲಿ ನಮೂದುಕಂಡ ತಾಲ್ಲೂಕ್ ಯಾ ಸಬ್ ತಾಲ್ಲೂಕ್ ಕಸಬಾಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿರುತ್ತೆ. ಹರಾಜುಗಳು ನೇಮಿಸಲ್ಪಟ್ಟ ತಾರೀಖುಗಳಲ್ಲಿ ಪೂರೈಸದೆಹೋದಲ್ಲಿ ಮೂರನೇ ದಿವಸಗಳಲ್ಲಿಯೂ (ರಜಾದಿವಸಗಳು ಹೊರತಾಗಿ) ಹಾಕಲ್ಪಡುವವು.

ಹರಾಜಿನ ಷರತ್ತುಗಳು.

II. ಪ್ರತಿ ಸವಾಲ್‌ದಾರನೂ ಹರಾಜಿಗೆ ಪೂರ್ವವೇ ತೇವಣಾತಿಯನ್ನು ಕಟ್ಟತಕ್ಕದ್ದು ಮತ್ತು ಹರಾಜಿನ ತಾರೀಖಿನ ದಿವಸ ಹರಾಜು ಮಾಡುವ ಆಫಿಸರಿಂದ ಸದರಿ ತೇವಣಿ ಮೊಬಲಗು ತೆಗದುಕೊಳ್ಳಲ್ಪಡುವದು. ಯಾವ ಮನುಷ್ಯನೂ ಮುಖ್ಯವಾದ ಅಂಗಡಿ ಯಾ ಅನೇಕ ಅಂಗಡಿಗಳಿಗಾಗಿ ಸವಾಲ್ ಮಾಡಬೇಕೆಂದು ಅಪೇಕ್ಷಿಸುತ್ತಾನೋ ಅಂಥಾವನು ಸಾಧಾರಣವಾಗಿ 50 ರೂಪಾಯಿ ತೇವಣಿಯನ್ನಿಡತಕ್ಕದ್ದು. ಸವಾಲು 2 ಯಾ 3 ಅಂಗಡಿಗಳಿಗೆ ವಿಚಾರದೆಯೂ ಮತ್ತು ಅವುಗಳ ಮಾಹೆಯಾನ ಒಟ್ಟು ಗುತ್ತಾ ಮೊಬಲಗು 50 ರೂಪಾಯಿ ಅಥವಾ ಅದಕ್ಕೆ ಕಮ್ಮಿಯಾಗಿಯೂ ಇದ್ದಪಕ್ಷದಲ್ಲಿ ಸವಾಲುದಾರನ ತೇವಣಿಯು 20 ರೂಪಾಯಿಗಳಿಗೆ ತಗ್ಗಿಸಲ್ಪಡುವದು ಮತ್ತು ಒಂದೊಂದು ಚಿಕ್ಕ ಅಂಗಡಿಗೆ ದರಖಾಸ್ತು ಮಾಡುವ ಸವಾಲ್‌ದಾರರ ತೇವಣಿಯು 5 ರೂಪಾಯಿಗೆ ತಗ್ಗಿಸಲ್ಪಡುವದು. ಯಾವದಾದರೂ ಅಂಗಡಿಗಳ ಮಾಹೆಯಾನ ಸರಾಸರಿ ಗುತ್ತಾ ಮೊಬಲಗು ಕೇವಲ ಕಮ್ಮಿಯಾಗಿದ್ದಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರು ಸದರಿ ಅಂಗಡಿಗಳ ಬಗ್ಗೆ ತಮ್ಮ ಯುಕ್ತಾನುಸಾರ ಇತರ ನ್ಯಾಯವಾದ ತೇವಣಿ ಮೊಬಲಗನ್ನು ಗೊತ್ತುಮಾಡಬಹುದು.

III. ಹರಾಜು ನಡಿಸತಕ್ಕ ಆಫಿಸರರಿಗೆ ಷೆಡ್ಯೂಲ್‌ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಕ್ರಮ ನಂಬರನ್ನು ಬದಲಾಯಿಸಲು ಕಾರಣ ತೋರುವ ಸಂದರ್ಭದಲ್ಲಿ ಹೊರತು ಆ ಪಟ್ಟಿಯಲ್ಲಿ ಕಂಡ ಕ್ರಮ ನಂಬರಿನಂತೆಯೇ ಅಂಗಡಿಗಳನ್ನು ಹರಾಜು ಮಾಡತಕ್ಕದ್ದು. ಹರಾಜು ನಡಿಸತಕ್ಕ ಆಫಿಸರರು ತಮಗೆ ಯುಕ್ತ ತೋರುವಂತೆ ಸರ್ಕಾರದ ಸಪಾಲನ್ನು ಗೊತ್ತುಮಾಡತಕ್ಕದ್ದು. ಅಂಗಡಿಗಳಮೇಲೆ ಸರ್ಕಾರದಿಂದ ನಿಷ್ಕರ್ಷೆ ಮಾಡಲ್ಪಟ್ಟ ಮೊಬಲಗನ್ನು ಫಾಯಿಷ್ ಮಾಡುವದಿಲ್ಲ ; ಆದರೆ ಸವಾಲುದಾರರ ತಿಳುವಳಿಕೆ ಬಗ್ಗೆ ಹಿಂದಿನ ಮೂರು ಸಾಲುಗಳ ಗುತ್ತಾ ಮೊಬಲಗೂ, ಬಕರಿಯ ಮೊತ್ತವೂ ಫಾಯಿಷ್ ಮಾಡಲ್ಪಡುವದು.

ಷರಾ—1. ಯಾವದಾದರೂ ಕಾಫಿ ಎಸ್ಟೇಟಿನಲ್ಲಿ ಕೇಂದಿ ಮಾರತಕ್ಕ ಹಕ್ಕು ಒಂದೊಂದು ಅಂಗಡಿಗೆ ವರುಷ 1ಕ್ಕೆ 12 ರೂಪಾಯಿಗೆ ಕಮ್ಮಿ ಇಲ್ಲದಂತೆ ಗೊತ್ತಾದ ಮೊಬಲಗ್ಗೆ ಕಾಫಿಪ್ಲಾಂಟರಿಗೆ ಮಾರಲ್ಪಡಬಹುದು.

ಷರಾ—2. ಕೇಂದಿ ಹುಟ್ಟುವಳಿಗೆ ಇರತಕ್ಕ ಹಕ್ಕು ಮಂಜೂರಾಗಿರುವ ಅಥವಾ ಇನ್ನೂ ತೀರ್ಮಾನವಾಗಿಲ್ಲದೆ ಇರುವ ಅನಾಂ ಗ್ರಾಮಗಳಲ್ಲಿರತಕ್ಕ ಕೇಂದಿ ಅಂಗಡಿಗಳು ಪ್ರತ್ಯೇಕವಾಗಿಯೇ ಹರಾಜ್ ಮಾಡಲ್ಪಡಬೇಕಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗನ್ನು ಲೆಖ್ಖಗಳಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.